ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE: 2/6/2020

ಕರೋನಾ ವಾರಿಯರ್ ಪತ್ನಿಗೆ ಕರೆ ಮಾಡಿ ಸಿಎಂ ಸಾಂತ್ವನ

2/6/20 ವಿ.ವ

ವಿಶ್ವವಾಣಿ ಸುದ್ದಮನೆ ಬೆಂಗಳೂರು

ನರ್ಸ್, ರೈತ ಮಹಿಳೆಗೆ ಕರೆ ಮಾಡಿದ್ದ ಸಿಎಂ

ಇನ್ನು ಈ ಹಿಂದೆ ಬೆಳಗಾವಿಯಲ್ಲಿ ಕೋರೋನಾ ವಿರುದ್ಧದ ಹೋರಾಟದಲ್ಲಿ ನಿರತರಾಗಿದ್ದ ಸುಗಂಧ ಎನ್ನುವ ನರ್ಸ್ ತಮ್ಮ ಮಗಳುಹುಟ್ಟಿದಾರಭ್ಯ ಕಣ್ಣೀರು ಹಾಕಿಕೆ ವಿಡಿಯೋ ವೈರಲ್ ಆಗಿತ್ತು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿಗಳು ಈ ವಿಚಾರವಾಗಿ ಸುಗಂಧ ಅವರೊಟ್ಟಿಗೆ ಮಾತನಾಡಿ, ಧೈರ್ಯ ತುಂಬಿದ್ದರು. ಇದಾದ ಬಳಿಕ ಲಾಕ್‌ಡೌನ್‌ನಿಂದ ಈರುಳ್ಳಿ ಬೆಳೆ ಕುಸಿದಿರುವ ಬಗ್ಗೆ ಚಿತ್ರದುರ್ಗದ ಮಹಿಳೆಯೊಬ್ಬರು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು. ಇದನ್ನು ಗಮನಿಸಿದ ಸಿಎಂ, ರೈತ ಮಹಿಳೆಯೊಂದಿಗೆ ಮಾತನಾಡಿ, ಸೂಕ್ತ ಬೆಲೆ ಕೊಡಿಸುವ ಭರವಸೆಯನ್ನು ನೀಡಿದ್ದರು.

ರಾಜ್ಯದಲ್ಲಿ ಕರೋನಾ ಜಾರಿಯಾದಾಗಿನಿಂದ ಕರ್ನಾಟಕದ ಕರೋನಾ ವಾರಿಯರ್‌ಗಳಿಗೆ ಆತ್ಮಸ್ಥೈರ್ಯ ತುಂಬುವುದಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಆವರು ಆಗಿದ್ದಾಗೆ ವಾರಿಯರ್‌ಗಳಿಗೆ ಕರೆ ಮಾಡಿ ಧೈರ್ಯ ತುಂಬುವ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಇದೀಗ ಕರೋನಾ ಹೋರಾಟದಲ್ಲಿರುವ ಆಂಬ್ಯುಲೆನ್ಸ್ ಚಾಲಕನೊಬ್ಬ ಹೃದಯಾಘಾತದಿಂದ ಮೃತಪಟ್ಟಿದ್ದು, ಆತನ ಪತ್ನಿಗೆ ಸಿಎಂ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ.

● ಕರ್ತವ್ಯದಲ್ಲಿದ್ದ ಆಂಬ್ಯುಲೆನ್ಸ್ ಚಾಲಕ ಹೃದಯಾಘಾತದಿಂದ ಮೃತ

ಹೌದು, ಗದಗ ಜಿಲ್ಲೆಯ ನರಗುಂದ ತಾಲೂಕಿನ ಕಣ್ಣೂರಿನಲ್ಲಿ 108 ಆಂಬ್ಯುಲೆನ್ಸ್‌ನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದ ಉಮೇಶ್ ಫಕೀರಪ್ಪ ಆವರು ಹೃದಯಾಘಾತದಿಂದ ಮೃತಪಟ್ಟಿದ್ದರು. ಕರ್ತವ್ಯ ನಿರತರಾಗಿದ್ದಾಗಲೇ ಕೊನೆಯುಸಿರು ಎಳೆದಿದ್ದ ಚಾಲಕನ ಕುಟುಂಬಕ್ಕೆ ಧೈರ್ಯ ಹೇಳುವ ಕೆಲಸವನ್ನು ಸೋಮವಾರ ಬೆಳಗ್ಗೆ ಯಡಿಯೂರಪ್ಪ ಅವರು ಮಾಡಿದರು.

ಫಕೀರಪ್ಪ ಅವರ ಪತ್ನಿಗೆ ಕರೆ ಮಾಡಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಇವರ ಕುಟುಂಬಕ್ಕೆ ನೆರವು ನೀಡುವ ಭರವಸೆ ನೀಡಿದ್ದಾರೆ. ದೂರವಾಣಿ ಕರೆ ಮಾಡಿ ಸಾಂತ್ವನ ಹೇಳಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡು ಸರಕಾರದಿಂದ ಏನೆಲ್ಲ ನೆರವು ನೀಡಲು ಸಾಧ್ಯವೋ ಅದನ್ನು ನೀಡುವುದಾಗಿ ಹೇಳಿದರು.

ಯಡಿಯೂರಪ್ಪ ಅವರು ಕರೆ ಮಾಡುತ್ತಲೇ, ಮನೆಯ ಪರಿಸ್ಥಿತಿಯ ಬಗ್ಗೆ ಹಾಗೂ ಗಂಡನನ್ನು ಕಳೆದುಕೊಂಡ ನೋವನ್ನು ಹೊರಹಾಕಿದ ಫಕೀರಪ್ಪ ಅವರ ಪತ್ನಿ, ಘಟನೆಯನ್ನು ವಿವರಿಸಿದರು. ತಮಗೆ ಹೊಲ ಇಲ್ಲ, ಮನೆ ಇಲ್ಲ, 12 ಮತ್ತು 7 ವರ್ಷದ ಇಬ್ಬರು ಮಕ್ಕಳಿದ್ದಾರೆ. ದಯವಿಟ್ಟು ನೆರವು ನೀಡಿ ಎಂದು ಅಳುತ್ತಲೇ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಧೈರ್ಯಗೆಡಬೇಡ ತಾಯಿ, ಸರಕಾರದಿಂದ ನೆರವು ಕೊಡುತ್ತೇನೆ ಎಂದು ಭರವಸೆಯನ್ನು ನೀಡಿದರು.